# "ಸಕಲವೂ ಒಂದೆ ಎಂದು ಕಂಡ ಗುರು" ಮೌನೇಶ್ವರರು

ಡಾ. ಮಹಾದೇವ ಬಡಿಗೇರ
ಪ್ರಾಧ್ಯಾಪಕರು, ಕನ್ನಡ ವಿಭಾಗ
ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು, ಕಲಬುರಗಿ

ಜಗತ್ತಿನಲ್ಲಿ ಅನೇಕ ಮಹಾಪುರುಷರು ಆಗಿಹೋಗಿದ್ದಾರೆ. ಕೆಲವರು ಒಂದು ಧರ್ಮಕ್ಕೆ ಸೀಮಿತವಾಗಿದ್ದರೆ, ಇನ್ನು ಕೆಲವರು ಒಂದು ಮತಕ್ಕೆ ಸೀಮಿತವಾಗಿದ್ದಾರೆ. ಕೆಲವರು ಒಂದು ಜಾತಿಗೆ ಸೀಮಿತವಾಗಿದ್ದರೆ, ಮತ್ತೆ ಕೆಲವರು ಒಂದು ಭಾಷೆಗೆ ಸೀಮಿತವಾಗಿದ್ದಾರೆ. ಮಹಾತ್ಮರೆನ್ನಿಸಿಕೊಂಡವರಿಗೇ ಇನ್ನೂ ಯಾವುದೋ ಸೀಮೆ ಚೌಕಟ್ಟುಗಳಿವೆ. ಆದರೆ ಮೌನೇಶ್ವರರಿಗೆ ಯಾವುದೇ ಸೀಮೆ-ಚೌಕಟ್ಟುಗಳ ಬಂಧನವಿಲ್ಲ. ಧರ್ಮ, ಮತ, ಜಾತಿ, ಭಾಷೆ, ಲಿಂಗ ಎಲ್ಲವನ್ನೂ ಮೀರಿ ಅಪ್ಪಟ ವೈಚಾರಿಕತೆಯನ್ನೆ ಬಿತ್ತಿ ಬೆಳೆದವರು ಮೌನೇಶ್ವರರು.

ಮೌನೇಶ್ವರರ ಮುಂದೆ ಪರಂಪರಾಗತವಾದ ಅಪಾರ ಧಾರ್ಮಿಕ, ತಾತ್ವಿಕ, ಸಾಮಾಜಿಕ ಪರಂಪರೆ ಇದ್ದರೂ ಅವರೆಂದೂ ಯಾವುದಕ್ಕೂ ಕಟ್ಟು ಬಿದ್ದವರಲ್ಲ. ತಮ್ಮ 'ದರ್ಶನ'ಕ್ಕೆ ಸಾಧ್ಯವಾದದ್ದನ್ನು ಮಾತ್ರ ನಂಬಿದವರು; ನಂಬಿ ನಡೆದವರು. ಹೀಗಾಗಿ ಅವರಲ್ಲಿ ಶುದ್ಧ ಸತ್ಯವೊಂದೆ ಇದೆ. ಅದಕ್ಕೆ ಯಾವುದರ ಲೇಪವಿಲ್ಲ. ಆ ಕಾರಣವಾಗಿಯೆ ಎಲ್ಲವನ್ನೂ ನಿಕಷಕ್ಕೆ ಒಡ್ಡುವ, ಒರೆಗೆ ಹಚ್ಚುವ, ಸತ್ಯವಾದದ್ದನ್ನು ಸ್ವೀಕರಿಸುವ ಮನೋಭಾವ ಅವರಲ್ಲಿದೆ. ಮೌನೇಶ್ವರರ ವಚನಗಳಲ್ಲಿ ಎಲ್ಲ ಧರ್ಮಗಳ, ಮತಗಳ, ದೇವರುಗಳ, ದರ್ಶನಗಳ ಪ್ರಸ್ತಾಪವಿದೆ. ಒಂದು ಧರ್ಮ-ಮತಗಳಿಗೆ ಸೇರಿದವರು ಇನ್ನೊಂದು ಧರ್ಮ-ಮತಗಳ ತತ್ವಗಳನ್ನು, ದೇವರುಗಳನ್ನು ಖಂಡಿಸುವ, ಹೀಯಾಳಿಸುವ ಪ್ರವೃತ್ತಿ ಮಧ್ಯಕಾಲೀನ ಸಮಾಜದಲ್ಲಿ ಸಹಜವೆಂಬಂತೆ ಇತ್ತು. ಆದರೆ ಮೌನೇಶ್ವರರು ಸತ್ಯ-ಅಸತ್ಯಗಳನ್ನು ಪರಿಗಣಿಸುತ್ತಾರೆಯೇ ಹೊರತು ಮತ-ಧರ್ಮಗಳನ್ನಲ್ಲ. ಮಹಾತ್ಮರೆನ್ನಿಸಿಕೊಂಡ ಕೆಲವರು ತಮ್ಮ ತತ್ವಜ್ಞಾನ ಕಾರಣವಾಗಿ ವಿದ್ವಜ್ಜನರಲ್ಲಿ ಪೂಜ್ಯರಾಗಿದ್ದಾರೆ. ಇನ್ನು ಕೆಲವರು ಜಾತ್ರೆ, ಉತ್ಸವ, ಪವಾಡ, ಲೋಕಕಲ್ಯಾಣ ಕಾರ್ಯಗಳಿಂದಾಗಿ ಪ್ರಸಿದ್ಧರಾಗಿದ್ದಾರೆ. ಆದರೆ ಮೌನೇಶ್ವರರು ಜನಸಾಮಾನ್ಯರಲ್ಲಿಯಂತೆಯೇ ವಿದ್ವತ್ ಪರಂಪರೆಯಲ್ಲಿಯೂ ಪೂಜ್ಯರಾಗಿದ್ದಾರೆ.

ಮೌನೇಶ್ವರರು ಜೀವಿಸಿದ್ದ ಕಾಲ ಮತ್ತು ಪರಿಸರದಲ್ಲಿ ಹಿಂದು ಮತ್ತು ಮುಸ್ಲಿಂ ಧರ್ಮಗಳು ವ್ಯಾಪಕ ಪ್ರಚಾರದಲ್ಲಿದ್ದವು. ಇಸ್ಲಾಂ ಧರ್ಮದ ಸರಿಮಿಗಿಲಾಗಿ ಭಾರತದ ಹಲವಾರು ಮತಗಳು-ಧರ್ಮಗಳು ಪ್ರಚಾರದಲ್ಲಿದ್ದವು. ವಿಜಾಪುರದ ಆದಿಲ್‌ಶಾಹಿಗಳ ರಾಜ್ಯದಲ್ಲಿ ಇಸ್ಲಾಂ ಧರ್ಮ ಬೆಳವಣಿಗೆ ಹೊಂದುತ್ತಿದ್ದರೆ, ಸುರಪುರದ ದೊರೆಗಳ ಆಳ್ವಿಕೆಯ ಪ್ರದೇಶದಲ್ಲಿ ಹಿಂದು ಧರ್ಮ ಅಸ್ತಿತ್ವದಲ್ಲಿ ಇತ್ತು.

ಒಂದು ಕಾಲಕ್ಕೆ ದಕ್ಷಿಣ ಭಾರತದಾದ್ಯಂತ ಹಬ್ಬಿದ್ದ ಜೈನಧರ್ಮ ಅತ್ಯಂತ ಕ್ಷೀಣಾವಸ್ಥೆಯಲ್ಲಿದ್ದರೆ, ಬೌದ್ಧ ಧರ್ಮದ ಕುರುಹುಗಳೂ ಕೂಡ ಸಿಗುತ್ತಿರಲಿಲ್ಲ. ಶೈವ, ವೈಷ್ಣವ ಮತಗಳು ಅತ್ಯಂತ ವ್ಯಾಪಕ ಪ್ರಚಾರದಲ್ಲಿದ್ದವು. ಶರಣರು-ದಾಸರು ಆಗಿಹೋಗಿ ಶತಮಾನಗಳೆ ಕಳೆದಿದ್ದು, ಈಗ ಆ ಪರಂಪರೆಯಲ್ಲಿ ಒಣ ಆಚಾರಗಳೆ ಮನೆ ಮಾಡಿಕೊಂಡಿದ್ದವು. ಶರಣರು-ದಾಸರು ಪ್ರತಿಪಾದಿಸಿದ ತತ್ವಗಳು ಮಾಯವಾಗಿ ಒಣ ಡಾಂಭಿಕತೆ ವಿಜೃಂಭಿಸತೊಡಗಿತ್ತು. ಜಾತಿ ವ್ಯವಸ್ಥೆ ಅತಿಯಾಗಿ ಮಾನವ ಶೋಷಣೆ ಮಿತಿ ಮೀರಿತ್ತು. ಮತಗಳ ಮಧ್ಯದ ಘರ್ಷಣೆ, ಭಿನ್ನಾಭಿಪ್ರಾಯಗಳು ಆಯಾ ಮತಗಳ

ಒಂದು ಭಾಗವೆ ಆಗಿತ್ತು. ಒಂದು ಮತದವರು ಇನ್ನೊಂದು ಮತದ ಆಚಾರಗಳನ್ನು, ದೇವರುಗಳನ್ನು ಅಸಹನೆಯಿಂದ ನೋಡುತ್ತಿದ್ದರು; ಅಪಮಾನಿಸುತ್ತಿದ್ದರು. ಈ ಮಧ್ಯ ಕೆಲವರು ಹಿಂದು-ಮುಸ್ಲಿಮರ ನಡುವೆ ದ್ವೇಷದ ವಾತಾವರಣವನ್ನು ನಿರ್ಮಾಣ ಮಾಡಲು ಪ್ರಯತ್ನಿಸುತ್ತಿದ್ದರು. ವ್ಯಕ್ತಿ, ಸಮಾಜ, ದೇಶದ ಬದುಕು, ಧರ್ಮ-ಮತ-ಜಾತಿಗಳ ಕಾರಣವಾಗಿ ವಿಘಟನೆಗೊಳ್ಳುತ್ತಿರುವ ಇಂತಹ ವಿಷಮ ಸಮಯದಲ್ಲಿ ಮೌನೇಶ್ವರರ ಉದಯವಾಯಿತು.

ಮೌನೇಶ್ವರರು ಯಾವ ಮತ-ಧರ್ಮಗಳನ್ನಾಗಲಿ ಟೀಕಿಸಲು ಹೋಗಲಿಲ್ಲ. ಒಟ್ಟಾರೆ ಕಳೆಯನ್ನು ಕೀಳಲು ಪ್ರಾಂಭಿಸಿದರು; ಅಲ್ಲಲ್ಲ ಅರಿವಿನ ಸಸಿಯನ್ನು ಬೆಳೆಯಲು ಮೊದಲು ಮಾಡಿದರು. ಆಯಾ ಧರ್ಮದವರು, ಮತದವರು ಮೌನೇಶ್ವರರನ್ನು ತಮ್ಮ ಧರ್ಮ-ಮತದವರಂತೆ ಭಾವಿಸಿದರು. ಆದರೆ ಮೌನೇಶ್ವರರು ಯಾವ ಬಂಧನಕ್ಕೂ ಒಳಗಾಗಲಿಲ್ಲ. ಅವರಿಗೆ ಅಜ್ಞಾನವೇ ಅಧರ್ಮ, ಜ್ಞಾನವೇ ಧರ್ಮವಾಗಿತ್ತು. ದೇವರು, ಧರ್ಮ, ದರ್ಶನಗಳ ಬಗ್ಗೆ ಮೌನೇಶ್ವರರ ನಿಲುವು ಅತ್ಯಂತ ಖಚಿತವಾದುದು; ಸತ್ಯವಾದುದು. ಒಂದನ್ನು ಭಗ್ನಗೊಳಿಸಿ ಇನ್ನೊಂದನ್ನು ಕೆಲವರಂತೆ ಅವರು ಕಟ್ಟಲಿಲ್ಲ. ಕೇವಲ 'ಸತ್ಯ'ವೊಂದನ್ನೆ ಪ್ರತಿಪಾದಿಸಿದರು. ಮೌನೇಶ್ವರರು ಹಿಂದು-ಮುಸ್ಲಿಂ ಧರ್ಮಗಳ 'ಋಜು'ವಾದುದನ್ನು ಸ್ವೀಕರಿಸುತ್ತಾರೆ. ಶೈವ, ವೈಷ್ಣವ ಮತಗಳ ಸತ್ಯವಾದುದನ್ನು ಗೌರವಿಸುತ್ತಾರೆ. ಶಿವ, ವಿಷ್ಣು, ರಾಮ, ಕೃಷ್ಣ, ವಿಠಲ, ಬ್ರಹ್ಮ, ಅಲ್ಲಾ ಎಲ್ಲ ದೈವರುಗಳು ಮೌನೇಶ್ವರರ ವಚನಗಳಲ್ಲಿ ಉಲ್ಲೇಖಿತರಾಗಿದ್ದಾರೆ. ಕೆಲವರು ಅಂದುಕೊಂಡಂತೆ ಮೌನೇಶ್ವರರು ವೇದ, ಶಾಸ್ತ್ರ, ಪುರಾಣ, ಷಡ್‌ದರ್ಶನಗಳನ್ನು ಅತಿಗಳೆಯಲಿಲ್ಲ; ಅವುಗಳಲ್ಲಿಯ ಗೊಳ್ಳನ್ನು ಮಾತ್ರ ಎತ್ತಿ ತೋರಿಸಿದ್ದಾರೆ. ಜಾತಿ ನಿರಾಕರಣೆಯ ಚಳುವಳಿಗಳು, ಕ್ರಾಂತಿಗಳು ಈ ನೆಲದಲ್ಲಿ ನಡೆದಿವೆ. ದುರಂತವೆಂದರೆ ಮುಂದೆ ಅವುಗಳೆ ಮತ್ತೊಂದು, ಮಗುದೊಂದು ಜಾತಿಗೆ ಕಾರಣವಾಗಿವೆ. ಆದರೆ ಮೌನೇಶ್ವರರ ವಚನಗಳಲ್ಲಿ ಅಂತಹ ಯಾವ ಅಂಶಗಳೂ ಕಂಡುಬರುವುದಿಲ್ಲ.

ಹಿಂದು-ಮುಸ್ಲಿಮರ ಐಕ್ಯತೆಗೆ ಮೌನೇಶ್ವರರ ಕೊಡುಗೆ ಗಮನಾರ್ಹವಾದುದು. ಇವರನ್ನು ವಿಜಯಪುರದ ಆದಿಲ್‌ಶಾಹಿಗಳು, ಸುರಪುರದ ದೊರೆಗಳು ಸಮಾನವಾಗಿ ಗೌರವಿಸುತ್ತಿದ್ದರು. ಮೌನೇಶ್ವರರನ್ನು ಕುರಿತು ಹಿಂದುಗಳಂತೆ ಮುಸ್ಲಿಮರೂ ಕೂಡ ಜನಪದಗೀತೆಗಳನ್ನು ರಚಿಸಿದ್ದಾರೆ. ಹಿಂದುಗಳು ಮೌನೇಶ್ವರರನ್ನು ವೃಷಭನ, ಅಲ್ಲಮನ, ಚೆನ್ನಬಸವಣ್ಣನ ಅವತಾರವೆಂದು ಗೌರವಿಸಿದರೆ, ಮುಸ್ಲಿಮರು ಮಹಮ್ಮದನೆಂದು, ಪೈಗಂಬರನೆಂದು, ಪೀರನೆಂದು, ಅಲ್ಲಾನೆಂದು ಸಂಬೋಧಿಸಿದ್ದಾರೆ. ಮೌನೇಶ್ವರರ ಐಕ್ಯಸ್ಥಳವಾದ ತಿಂಥಣಿಯಲ್ಲಿರುವ ಮೌನೇಶ್ವರ ದೇವಸ್ಥಾನದ ವಾಸ್ತು; ಹಿಂದು-ಮುಸ್ಲಿಮರ ಐಕ್ಯತೆಗೆ ಜೀವಂತ ನಿದರ್ಶನವಾಗಿದೆ. ಮೌನೇಶ್ವರ ದೇವಾಲಯದ ಗರ್ಭಗುಡಿಯ ನೆಲಮಾಳಿಗೆ ಗವಿ ರೂಪದಲ್ಲಿದ್ದರೆ, ಗರ್ಭಗುಡಿಯ ಒಳಭಾಗ 'ಮಜಾರ'ದ ರೂಪದಲ್ಲಿದೆ. ತಿಂಥಣಿಯಲ್ಲಿ ಪ್ರತಿವರ್ಷ ಭಾರತ ಹುಣ್ಣಿಮೆಯಂದು ನಡೆಯುವ ಆರು ದಿನಗಳ ಮೌನೇಶ್ವರ ಜಾತ್ರೆಯ ಆಚರಣೆಗಳು ಹಿಂದು-ಮುಸ್ಲಿಂ ಭಾವೈಕ್ಯತೆಯ ಪ್ರಮುಖ ಸಾಕ್ಷಿಗಳಾಗಿವೆ. ಹಿಂದುಗಳು ಸಂಸ್ಕೃತ, ಕನ್ನಡ, ತೆಲುಗು, ಮರಾಠಿ ಭಾಷೆಗಳಲ್ಲಿ ಮೌನೇಶ್ವರರನ್ನು ಸ್ತುತಿಸಿದರೆ, ಮುಸ್ಲಿಮರು ಉರ್ದುವಿನಲ್ಲಿ ಹಾಡಿ ಹೊಗಳುತ್ತಾರೆ. 'ಮೌನೇಶ್ವರರನ್ನು ಕುರಿತ ಓಂ ಏಕಲಾಖ ಐಂಸಿ ಹಜಾರ ಪಾಚೋ ಪೀರ ಪೈಗಂಬರ ಮೌನದೀನ್ ಜಿತಾ ಪೀರ ಪೈಗಂಬರ ಮೌನದೀನ್ ಕಾಶಿಪತಿ ಗಂಗಾಧರ ಹರಹರ ಮಹಾದೇವ' ಎನ್ನುವ ಸ್ತೋತ್ರವೆ ಭಾವೈಕ್ಯತೆಗೆ ಹಿಡಿದ ಕನ್ನಡಿಯಾಗಿದೆ.

"ಹಿಂದು ತುರುಕರಿಗೆ ಚಂದ್ರಮನೊಬ್ಬನೆ
ನಿಂದಿಸಿದವನೆ ಅಧಮನು, ಕಾಣದ
ಅಂಧಕರಿಗೇಕೆ ದರ್ಪಣವು ಸಕಲವು

ಒಂದೆ ಎಂದು ಕಂಡ ಗುರು ಬೇರೆ ಬಸವಣ್ಣ”
ಎಂಬುವುದು ಮೌನೇಶ್ವರರ ಒಂದು ಪ್ರಸಿದ್ಧ ವಚನ. ಪರಸ್ಪರ ನಿಂದಿಸುವವರೆ ಅಧಮರು; ಅಧರ್ಮಿಯರು. ಪರಸ್ಪರ ಗೌರವ ಭಾವನೆಯಿಂದ ಕಾಣುವವರೆ ಧಾರ್ಮಿಕರು; ಧರ್ಮವಂತರು. ಧರ್ಮವೆಂದರೆ ಎಲ್ಲರನ್ನೂ ಗೌರವಿಸುವುದು, ಸ್ವೀಕರಿಸುವುದು, ಎಲ್ಲವೂ ಒಂದೇ ಎಂದು ತಿಳಿದು ಆಚರಿಸುವುದು, ಅಧರ್ಮಿಯರಿಗೆ ಮಾತ್ರ ಭೇದಬುದ್ಧಿ ಹುಟ್ಟುತ್ತದೆ. ಧರ್ಮವಂತರಿಗೆ ಅಲ್ಲ. ಭಿನ್ನ ಸಂಸ್ಕೃತಿಯಲ್ಲಿ ಸೂರ್ಯ ಚಂದ್ರಾದಿಗಳ ವಿವರ ಬೇರೆ ಬೇರೆಯಾಗಿರಬಹುದು. ಆದರೆ ಅರಿವುಳ್ಳವರಿಗೆ ಕಾಣುವುದು ಒಂದೆ.

“ಈತ ಹಿಂದು ಮುಸಲ್ಮಾನ ಹೋತೆ
ಬಾತ ಕರೇತೊ ಶಂಭು ಸಮತೆ ಹೋತೆ
ಪುತ್ರ ಪೂಜಿ ತೋ ಖ್ಯಾಲ ಕಡೆಗಾಹಿ ಗಮ್ಮಾತ
ಪಂಚಮುಖ ಪರಮಾತ್ಮ ಹೋತೆ, ಬಸವಣ್ಣ”

ಸಾಧನೆಯಿಂದ ಸಾಧಿಸಿದರಾಗಲಿ, ಅರಿವಿನಿಂದ ದರ್ಶಿಸಿಕೊಂಡರಾಗಲಿ, ಪ್ರಕಟವಾಗುವವನು ಒಬ್ಬನೆ. ಅವನಿಗೆ ಶಂಭುವೆಂದು ಕರೆದರಾಗಲಿ, ಪಂಚಮುಖ ಪರಮಾತ್ಮನೆಂದು ಕರೆದರಾಗಲಿ, ಅಲ್ಲಾನೆಂದು ಕರೆದರಾಗಲಿ ವ್ಯತ್ಯಾಸವಿಲ್ಲ. ಹಿಂದು, ಮುಸ್ಲಿಂ, ಶಂಭು, ಅಲ್ಲಾ ಹೆಸರುಗಳು ಮಾತ್ರ. ನಾಮ-ರೂಪಗಳು ಬೇರೆ ಬೇರೆಯಾಗಿರಬಹುದು. ಆದರೆ ಅವುಗಳ ಹಿಂದಿರುವ ಸತ್ಯ ಮಾತ್ರ ಒಂದೆ ಆಗಿರುತ್ತದೆ. ಮೌನೇಶ್ವರರು ಕೂಡ ಹಿಂದುಗಳಿಗೆ ಹಿಂದುವಾಗಿ, ಮುಸ್ಲಿಮರಿಗೆ ಮುಸ್ಲಿಮರಾಗಿ, ಅರಿವುಳ್ಳವರಿಗೆ ‘ಕೇವಲ ಜ್ಞಾನ’ವಾಗಿ ಕಂಡಿದ್ದಾರೆ.

“ಹಿಂದು ತುರುಕರು ಒಂದಾಗಿ ನಡದಾರು
ದೀನ್‌ದಾರ ಬಸವಣ್ಣ ಬರುವಾಗ, ಲೋಕದ
ಅಂಧಕರಿಗೇನು ತಿಳಿಯದು ಬಸವಣ್ಣ”
ಭೌತಿಕ ಕುರುಡುತನಕ್ಕಿಂದ ಮಾನಸಿಕ ಕುರುಡುತನ ಅಪಾಯಕಾರಿ, ಧರ್ಮಾಂಧತೆಯಂತೂ ಸರ್ವನಾಶಕಾರಿ. ಇಲ್ಲಿ ಧರ್ಮಾಂಧತೆಯನ್ನು ಬಿತ್ತುವವರೆ ಬಹಳ ಜನ. ಅಂತಹವರ ಅಜ್ಞಾನದ ಪರೆ ಹರಿಯಬೇಕಾಗಿರುವುದು ಅತ್ಯಂತ ಅವಶ್ಯಕವಾಗಿದೆ. ಅದಕ್ಕೆ ಒಬ್ಬ ಕಾರಣಿಕ ಪುರುಷ ಬರಬೇಕು. ಅಂತಹ ಜ್ಯೋತಿ ಬಂದೇ ಬರುತ್ತದೆ. ಆಗ ಕತ್ತಲೆ ಕರಗುತ್ತದೆ. ಅಧರ್ಮದ ಕಳೆ ಹೋಗಿ ಧರ್ಮದ ಬೆಳೆ ಬೆಳೆಯುತ್ತದೆ. ಖಂಡಿತವಾಗಿಯೂ ಹಿಂದು-ತುರುಕರು ಒಂದಾಗುತ್ತಾರೆ; ಒಂದಾಗಿ ಬಾಳುತ್ತಾರೆ. ಮೌನೇಶ್ವರರ ಈ ಆಶಯ ಅತ್ಯಪೂರ್ವವಾದುದು. ವರ್ತಮಾನ-ಭವಿಷ್ಯತ್ತುಗಳನ್ನು ಸರಿದಾರಿಗೆ ತರುವಂತಹುದು. ಮೌನೇಶ್ವರರ ವಚನಗಳನ್ನು ಅಧ್ಯಯನ ಮಾಡಿದರೆ ಅವರಿಗೆ ವೇದ, ಶೈವಾಗಮ, ಜೈನಾಗಮ, ಬೌದ್ಧ ಗ್ರಂಥಗಳ, ಸಾಂಖ್ಯ, ಯೋಗ, ನ್ಯಾಯ, ವೈಶೇಷಿಕ, ಮೀಮಾಂಸೆ, ವೇದಾಂತ ಷಡುದರುಶನಗಳ, ಅವರ ಸಮಯದಲ್ಲಿ ಪ್ರಚಲಿತದಲ್ಲಿದ್ದ ಯೋಗಿ, ಜೋಗಿ, ಶ್ರವಣ, ಸನ್ಯಾಸಿ, ಪಶುಪತಿ, ಕಾಳಾಮುಖ ಸಂಪ್ರದಾಯಗಳ ಪರಿಚಯವಿತ್ತೆಂದು ತೋರುತ್ತದೆ. ಅಲ್ಲದೆ ಶಂಕರ, ರಾಮಾನುಜ, ಮಧ್ವ, ಬಸವ, ಪುರಂದರರ ತತ್ವಸಿದ್ಧಾಂತಗಳ ಸಮಗ್ರ ತಿಳುವಳಿಕೆ ಅವರಿಗೆ ಇತ್ತೆಂದು ಕಂಡುಬರುತ್ತದೆ. ತತ್ವಪದಗಳಂತಹ ಅನುಭಾವಿ ಪರಂಪರೆಯ ಅರಿವು ಮೌನೇಶ್ವರರಿಗಿರುವುದೂ ವೇದ್ಯವಾಗುತ್ತದೆ. ಇಂತಹ ಧಾರ್ಮಿಕ, ತಾತ್ವಿಕ ಪರಂಪರೆಯಲ್ಲಿ ಕೆಲವು ಮೌನೇಶ್ವರರ ಕಾಲಕ್ಕಾಗಲೆ ಸಾಂಸ್ಥೀಕರಣಗೊಂಡು, ಚಲನಶೀಲತೆಯನ್ನು ಕಳೆದುಕೊಂಡಿದ್ದವು. ತಮ್ಮ ಮತವೇ ಶ್ರೇಷ್ಠ, ತಮ್ಮ ದೇವರು ಮಾತ್ರ ದೇವರು ಎಂದು ವಾದಿಸುತ್ತ ಪ್ರಚಾರ ಮಾಡುತ್ತಿದ್ದರು. ಅನ್ಯ ಮತ, ದೈವ ನಿಂದನೆ ಸಾಮಾನ್ಯವಾಗಿತ್ತು. ಮೌನೇಶ್ವರರು ಎಲ್ಲವನ್ನೂ ತಮ್ಮ ಕುಲುಮೆಯಲ್ಲಿ

ಒರೆಗೆ ಹಚ್ಚಿದರು. ಯಾವುದೇ ಮತಪಂಥಗಳಿರಲಿ ಅವುಗಳಲ್ಲಿಯ ಗೊಡ್ಡು ಆಚರಣೆ ಡಾಂಬಿಕತೆಯನ್ನು ಖಂಡಿಸುತ್ತ ಒಳ್ಳೆಯದನ್ನು ಎತ್ತಿಹಿಡಿದರು. ಒಂದು ರೀತಿಯಿಂದ ಮೌನೇಶ್ವರರು ಈ ಎಲ್ಲ ಮತಗಳನ್ನು ಉಜ್ಜಿ ಹೊಳೆಯುವಂತೆ ಮಾಡಿದರು. ಮೌನೇಶ್ವರರು ಯಾವ ಮತ-ಪರಂಪರೆಯನ್ನೂ ಹುಟ್ಟುಹಾಕಲಿಲ್ಲ; ಹುಟ್ಟು ಹಾಕುವಂತಹ ವಿಚಾರಗಳನ್ನು ಪ್ರತಿಪಾದಿಸಲಿಲ್ಲ. ಅವರ ವಚನಗಳು ಸತ್ಯವಾದುದನ್ನು; ಶಾಶ್ವತವಾದುದನ್ನು ಮಾತ್ರ ದರ್ಶಿಸುತ್ತವೆ.

"ಸತ್ಯದ ಬೀಜವ ಎತ್ತಿನ ಮೇಲೆ ಹೇರಿಕೊಂಡು
ಎತ್ತುತ್ತಲ್ಲಾನೆ ಇಳುಹುತಲ್ಲಾನೆ ಧರ್ಮದ
ತತ್ವವ ಕೊಂಡು ಧರೆಗಿಳಿದ ಬಸವಣ್ಣ"

ಅಸತ್ಯ ಕಳೆಯುತ್ತ ಹೋದ ಹಾಗೆ ಕೊನೆಗೆ ಯಾವುದು ಉಳಿಯುವುದೋ ಅದೇ ಸತ್ಯ; ಅದೇ ದೇವರು. ಮೌನೇಶ್ವರರು ಅಂತಹ ಸತ್ಯವನ್ನು ಮಾತ್ರ ನುಡಿಯುವವರು; ನಡೆಯುವವರು. ಅವರು ಕೇವಲ ಧರ್ಮವನ್ನು ಮಾತ್ರ ಬಿತ್ತಿ ಬೆಳೆದಿದ್ದಾರೆ. ಧರ್ಮವಿರುವುದು ಒಂದೆ. ಅಧರ್ಮಗಳಿಗೆ ಲೆಕ್ಕವಿಲ್ಲ.

ಮೌನೇಶ್ವರರು ಹರಿಹರರಲ್ಲಿ ಭೇದವೆಣಿಸುವುದಿಲ್ಲ. 'ಹರನೆ ಕಮ್ಮಾರನು, ವಿಷ್ಣುವೆ ಬಡಿಗನು, ಬಸವಣ್ಣನೆ ಎತ್ತಲ್ಲವೆ, ಈ ಲೋಕದ ಕತ್ತೆಗಳೇನು ಬಲ್ಲರು, ಎನ್ನುವಲ್ಲಿ ಲೋಕದ ನಿಜವಾದ ಕ್ರಿಯಾಶಕ್ತಿ ಯಾವುದು ಎಂಬುದನ್ನು ಸೂಚಿಸುತ್ತಾರೆ. ವೇದ ಶಾಸ್ತ್ರಗಳ ಬಗ್ಗೆ ಬಸವಣ್ಣನ ನಿಲುವೇನು ಎಂಬುದು ಸ್ಪಷ್ಟವಾಗಿದೆ. ಆದರೆ ಮೌನೇಶ್ವರರು ಬಸವಣ್ಣನನ್ನು ಪರಬ್ರಹ್ಮನೆಂದು, ವೇದಸಂಪನ್ನನೆಂದು, ಆದಿಪುರುಷನೆಂದು ಕರೆದಿದ್ದಾರೆ. ಜ್ಞಾನಿಗಳಿಗೆ ಮಾತ್ರ ಇದು ತಿಳಿಯಲು ಸಾಧ್ಯವೆಂದು ಅವರ ಅಭಿಪ್ರಾಯವಾಗಿದೆ. 'ಪಂಥ ಕೋಪಗಳನ್ನು ಆಡ ಸಲ್ಲ, ನಿಮ್ಮ ಅಂತರಂಗದಲ್ಲಿ ತಿಳಿದು ನೋಡಿರಿಯಲ್ಲ' ಎಂದು ಅರಿವು ಮೂಡಿಸುತ್ತಾರೆ. ಅರಿವಿನ ಬೆಳಕಿನಲ್ಲಿ ಎಲ್ಲವೂ ಒಂದೆ ಎಂದು ತೋರುತ್ತದೆ. ಅಜ್ಞಾನಿಗಳಿಗೆ ಎಲ್ಲವೂ ಬೇರೆ ಬೇರೆಯಾಗಿ ಕಂಡರೆ, ಜ್ಞಾನಿಗಳಿಗೆ ಸಕಲವೂ ಒಂದೆ ಎಂದು ವೇದ್ಯವಾಗುತ್ತದೆ. ಡಾಂಭಿಕ ಶರಣರು, ದಾಸರು, ಮುಗ್ದ ಜನರನ್ನು ತಪ್ಪುದಾರಿಗೆ ಎಳೆಯುತ್ತ ಶೋಷಣೆ ಮಾಡುವುದನ್ನು ಮೌನೇಶ್ವರರು ಖಂಡಿಸುತ್ತಾರೆ. ಇವರೆಲ್ಲ 'ಬೇಸರಿಕೆಗೆ ಒಡಲ ಹೊರೆವವರು' ಎನ್ನುತ್ತಾರೆ. ಇಂತಹವರನ್ನು ಸರಿದಾರಿಗೆ ತರಲು ಬಸವಣ್ಣ ಬಂದಿದ್ದಾನೆ ಎಂದು ಹೇಳುತ್ತಾರೆ. ಮೌನೇಶ್ವರರ ಬಹಳಷ್ಟು ವಚನಗಳಲ್ಲಿ ತಾವು ಅಲ್ಲಮನಾಗಿ, ಚೆನ್ನಬಸವಣ್ಣನಾಗಿ ಬಂದಿರುವುದಾಗಿ ಹೇಳುತ್ತಾರೆ. ಬಸವಾದಿ ಶರಣರ ದಟ್ಟವಾದ ಪ್ರಭಾವ ಮೌನೇಶ್ವರರ ಮೇಲಿದೆ. ಕಾಲಧರ್ಮಕ್ಕೆ ಅನುಗುಣವಾಗಿ, ಅವರ ಮುಂದುವರಿದ ರೂಪವಾಗಿ ಮೌನೇಶ್ವರರು ತೋರುತ್ತಾರೆ. ಅಲ್ಲಮನದು ಒಂದು ದಾರಿಯಾದರೆ, ಚೆನ್ನಬಸವಣ್ಣನದು ಇನ್ನೊಂದು ದಾರಿ. ಮೌನೇಶ್ವರರಲ್ಲಿ ಇವೆರಡರ ಸಮನ್ವಯವಿರುವುದನ್ನು ಕಾಣಬಹುದು. ಪುರಾತನರು ನೂತನಪುರಾತನರು ಭೇದ ಬುದ್ಧಿಯ ತೊಲಗಿಸಿ, ದ್ವೇಷಾಸೂಯೆಗಳನ್ನು ನಿರ್ಮೂಲನ ಮಾಡಲು ನಿರಂತರವಾಗಿ ಪ್ರಯತ್ನಿಸಿದರೂ ಮತ-ಪಂಥಗಳ ಭಾವ-ಬುದ್ಧಿಗಳ ಮಧ್ಯದ ಒಡಕು ಮೌನೇಶ್ವರರ ಕಾಲದವರೆಗೂ ನಿರಂತರವಾಗಿ ಹರಿದು ಬಂದಿದೆ. ಇದನ್ನು ಕಂಡ ಮೌನೇಶ್ವರರು 'ಸತ್ಯ ಒಂದೇ ಕೆಡದಾಡಬೇಡಿ' ಎಂದು ನಾನಾ ಪರಿಯ ದೃಷ್ಟಾಂತ, ಸಿದ್ಧಾಂತಗಳ ಮೂಲಕ ಪ್ರತಿಪಾದಿಸುತ್ತಾರೆ. 'ಕಲ್ಲು ಒಂದೆ, ಶಿಲ್ಪಿಯೂ ಒಬ್ಬನೆ, ಉಳಿ-ಕೊಡತಿಗಳು ಅವೇ ಬೇರೆ ಬೇರೆ ರೂಪ-ನಾಮಗಳನ್ನು ನೋಡಬೇಡಿರೆಂದು; ಬಾಹ್ಯದ ವೈವಿಧ್ಯದ ಹಿಂದಿರುವ ನಿತ್ಯಸತ್ಯವನ್ನು ತಿಳಿದುಕೊಳ್ಳಿರೆಂದು ಹೇಳುತ್ತಾರೆ. 'ಕೆಲದಾಡಬೇಡಿ ಶರಣರರ್‍ಯಾ' ಎನ್ನುವಲ್ಲಿ ಬಸವಾದಿ ಶರಣ ಪರಂಪರೆಯಲ್ಲಿ ಒಡಕು ಮೂಡುತ್ತಿರುವುದನ್ನು ಕಂಡು ಅದನ್ನು ಹೋಗಲಾಡಿಸಲು ಅರಿವಿನ ದಾರಿಯನ್ನು ತೋರುತ್ತಾರೆ. ಶಿವ, ಬ್ರಹ್ಮ, ರಾಮ, ಕೃಷ್ಣ, ಪಾಂಡುರಂಗ ವಿಠಲ ಮುಂತಾದ ದೈವದ ಹೆಸರುಗಳು ಮೌನೇಶ್ವರರ

ವಚನಗಳಲ್ಲಿ ಉಲ್ಲೇಖಗೊಂಡಿವೆ. ರಾಮನ ಅವತಾರ ಕುರಿತ ಒಂದು ವಚನದಲ್ಲಿ ರಾಮನು ತನ್ನ ಆದರ್ಶಗಳಿಂದಾಗಿ ಒಂದು ಸಾಂಸ್ಕೃತಿಕ ಲೋಕಕ್ಕೆ ಅಧಿಪತಿಯಾಗಿದ್ದಾನೆಂದು ಅಭಿಪ್ರಾಯಪಡುತ್ತಾರೆ.

ಭಾರತೀಯ ದರ್ಶನ ಪರಂಪರೆಯಲ್ಲಿ ಷಡುದರುಶನಗಳು ಅತ್ಯಂತ ಪ್ರಮುಖವಾಗಿವೆ. ಇಲ್ಲಿಯ ಎಲ್ಲ ಮತಧರ್ಮಗಳು ಒಂದಿಲ್ಲೊಂದು ರೀತಿಯಿಂದ ಅವುಗಳ ಪ್ರಭಾವಕ್ಕೆ ಒಳಗಾಗಿವೆ. ವಿವಿಧ ತತ್ವಜ್ಞಾನಿಗಳು, ಮತ ಪ್ರವರ್ತಕರು, ಧಾರ್ಮಿಕ ಗ್ರಂಥಕರ್ತೃಗಳು ತಮ್ಮ ತಮ್ಮ ಕಾಲದಲ್ಲಿ ಪ್ರಚಲಿತವಿರುವ ಬೇರೆ ಬೇರೆ ದರ್ಶನಗಳನ್ನು, ಪಂಗಡ ಪರಂಪರೆಗಳನ್ನು ಉಲ್ಲೇಖಿಸಿದ್ದಾರೆ. ಬೇರೆಯವುಗಳನ್ನು ಖಂಡಿಸಿ ತಮ್ಮ ಮತವನ್ನು ಪ್ರತಿಷ್ಠಾಪಿಸಲು ಪ್ರಯತ್ನಿಸಿದ್ದಾರೆ. ಮೌನೇಶ್ವರರೂ ಕೂಡ ತಮ್ಮ ಕಾಲದಲ್ಲಿ ಪ್ರಮುಖವಾಗಿ ಪ್ರಚಲಿತವಿರುವ ಆರು ದರುಶನಗಳನ್ನು ಉಲ್ಲೇಖಿಸಿದ್ದಾರೆ. ಅವು ಯೋಗಿ, ಜೋಗಿ, ಶ್ರವಣ, ಸನ್ಯಾಸಿ, ಪಶುಪತಿ, ಕಾಳಾಮುಖ. ಅವುಗಳ ಪರಾಮರ್ಶೆಗೆ ಮೌನೇಶ್ವರರು ಹೋಗುವುದಿಲ್ಲ. ಇವೆಲ್ಲವು ವೈದಿಕ, ಶೈವ, ಜೈನ ತಾತ್ವಿಕ ಪರಂಪರೆಯ ಮೂಲಗಳಿಂದ ಟಿಸಿಲೊಡೆದವುಗಳಾಗಿವೆ. ಮೌನೇಶ್ವರರು ಒಂದು ಮತ ಸ್ಥಾಪಿಸಲು ಹೊರಟವರಾಗಿದ್ದರೆ ಈ ಆರು ದರುಶನಗಳನ್ನು ತೀಕ್ಷ÷ ್ಣ ಟೀಕೆಗೆ ಒಳಪಡಿಸುತ್ತಿದ್ದರು.

ಜಾತಿ ವ್ಯವಸ್ಥೆ ಭಾರತೀಯ ಸಮಾಜಕ್ಕಂಟಿದ ಕಳಂಕವಾಗಿದೆ. ಸಾವಿರಾರು ವರ್ಷಗಳಿಂದಲೂ ಮಹಾತ್ಮರು ಈ ಅನಿಷ್ಟವನ್ನು ತೊಲಗಿಸಲು ನಿರಂತರ ಪ್ರಯತ್ನಸುತ್ತಲೆ ಬಂದಿದ್ದಾರೆ. ಆದರೆ ಈ ಮಹಾರೋಗ ಒಂದಿಲ್ಲೊAದು ಕಾರಣಗಳಿಂದ ಬೆಳೆಯುತ್ತಲೆ ಬಂದಿದೆ. ಕೆಲವರು ಬಾಹ್ಯ ಅನುಕೂಲತೆಗಳನ್ನೊದಗಿಸುವುದರ ಮೂಲಕ, ಇನ್ನು ಕೆಲವರು ಜನರ ಆಂತರಿಕ ಪರಿವರ್ತನೆ ಮಾಡುವುದರ ಮೂಲಕ ಜಾತಿ ವಿನಾಶಕ್ಕೆ ಪ್ರಯತ್ನಿಸುತ್ತ ಬಂದಿದ್ದಾರೆ. ಜಾತಿ ವಿನಾಶದ ಬಗ್ಗೆ ಸಾಮಾಜಿಕ ಚಿಂತಕರ ವಿಚಾರಗಳು, ಧಾರ್ಮಿಕ ಸುಧಾರಕರ ಉಪಾಯಗಳು ಬೇರೆ ಬೇರೆಯಾಗಿವೆ. ಮೌನೇಶ್ವರರು ಧರ್ಮ, ಮತ, ಪಂಗಡಗಳ ಮಧ್ಯ ಸಾಮರಸ್ಯ ತರಲು ಪ್ರಯತ್ನಿಸಿದಂತೆ, ಮನುಷ್ಯರ ಮಧ್ಯ ಬೆಳೆದುನಿಂತ ಅಮಾನವೀಯ ಜಾತಿಯೆಂಬ ಅಡ್ಡಗೋಡೆಯನ್ನು ಒಡೆಯಲು ನಿರಂತರವಾಗಿ ಪ್ರಯತ್ನಿಸಿದ್ದಾರೆ. ಅದಕ್ಕಾಗಿ ಅವರು ಬಳಸಿದ್ದು ಜ್ಞಾನವೆಂಬ ಖಡ್ಗ.

"ಸಾವು ಮರಣಗಳೊಂದೆ ನೋವು ಬ್ಯಾನಿಗಳೊಂದೆ
ಜನಿತಗಳು ಒಂದೆ ಸಕಲರ ಕುಲವೆಲ್ಲ ಒಂದೆ
ಇದರೊಳಗೆ ಆವ ಕುಲ ಹಿರಿಯ ಕಿರಿಯ ಎನ್ನಬಹುದು ಬಸವಣ್ಣ"

ಎನ್ನುವಲ್ಲಿ ತಮ್ಮ ಕುಲವೆ ಶ್ರೇಷ್ಠವೆಂದು ಬೀಗುವ ಸ್ವಾರ್ಥಿಗಳಿಗೆ ಪ್ರಕೃತಿ ಸಹಜವಾದ ಹುಟ್ಟು-ಸಾವು-ರೋಗ-ರುಜಿನಗಳ ಉದಾಹರಣೆ ಕೊಡುತ್ತಾರೆ. ಮೇಲು ಜಾತಿಯವರೆಂದು ತಮ್ಮನ್ನು ತಾವು ಕರೆದುಕೊಳ್ಳುವ ಅಹಂಕಾರಿಗಳು, ಜಾತಿಯ ಹೆಸರನ್ನೆತ್ತಿ ಕೆಳ ಜಾತಿಯವರನ್ನು ನಿಂದನೆ ಮಾಡುತ್ತಾರೆ. ಆಯಗಾರರನ್ನು, ದಲಿತರನ್ನು ಕಂಡು ಜಾತಿಯ ಹೆಸರೆತ್ತಿ ಕರೆದು ಕುಚೇಷ್ಟೆ ಮಾಡುತ್ತಾರೆ; ಮಾನಸಿಕ ಹಿಂಸೆ ಕೊಡುತ್ತಾರೆ. ಇಂತಹ ದುರುಳರನ್ನು ಕಂಡು ಮೌನೇಶ್ವರರು 'ನಿಮ್ಮ ಅಂತರಂಗವನ್ನು ಹೊಕ್ಕು ತಿಳಿದು ನೋಡಿರಿ, ಜಾಡ, ಹಟಕಾರನೆಂದು ಆಡಿ ಕೆಡಬೇಡಿರಿ' ಎನ್ನುತ್ತಾರೆ.

"ಯೋನಿಯ ಮುಖದಿಂದ ಮಾನವ
ಚಾಣದ ಮುಖದಿಂದ ದೈವವ
ನೀನು ನಾನೆಂಬ ಮಾತಿನ ಮತ್ಸರದಿಂದ

ಹಾನಿಯಾಯಿತು ನರಜನ್ಮ ಬಸವಣ್ಣ"
ಮಾನವನ ಜನಿತ ಕ್ರಿಯೆ ಒಂದೆ. ಜಾತಿ ಆಧಾರದ ಮೇಲೆ ಹುಟ್ಟುವ ಕ್ರಿಯೆ ಬೇರೆ ಬೇರೆಯಾಗುತ್ತದೆಯೆ? ಅಂತಹವರು ತಮಗಾಗಿ ಸೃಷ್ಟಿಸಿಕೊಂಡ ದೇವರುಗಳು ಕೂಡ ಚಾಣದ ಮುಖದಿಂದ ಬಂದವು. ಜಾತಿ-ಮತಗಳನ್ನು ಮುಂದೆ ಮಾಡಿಕೊಂಡು ಇರುವ ಒಂದು ಜನ್ಮವನ್ನು ಏಕೆ ಹಾಳು ಮಾಡಿಕೊಳ್ಳುತ್ತೀರಿ. ಇದರಿಂದ ಮಾನವ ಕೋಟಿಯೆ ಕೆಟ್ಟು ಹೋಗುವುದಿಲ್ಲವೆ? ಎನ್ನುವ ಮೌನೇಶ್ವರರು, ಅರಿತು ನೋಡಿರಿ, ಅರಿತರೆ ಯಾವ ಜಾತಿಯೂ ಇಲ್ಲ, ಮತವೂ ಇಲ್ಲ ಎನ್ನುತ್ತಾರೆ. ಅರಿವಿನ ಮೂರುತಿಯಾದ "ಪಾಂಡುರಂಗ ವಿಠಲನು ಪಂಡಿತರಿಗೆ ಒಲಿದನೆ ಚಾಂಡಾಲ ಚೋಖಾಮಿಳಯ್ಯಗೆ ಒಲಿದನು ಬಸವಣ್ಣ" ಎನ್ನುತ್ತಾರೆ. ಶ್ರೇಣೀಕೃತ ವ್ಯವಸ್ಥೆಯಲ್ಲಿ ಎಲ್ಲರೂ ಜಾತಿಭೇದ ಮಾಡುವವರೆ. ಇಂತಹವರು ಜಾತಿ ವ್ಯವಸ್ಥೆಗೆ ಶಾಸ್ತ್ರ, ಪುರಾಣ, ಮಡಿ, ಮೈಲಿಗೆಗಳ ಆಧಾರ ಬೇರೆ ಕೊಡುತ್ತಾರೆ. ಚತುರ್ವರ್ಣದವರು ವರ್ಣವ್ಯವಸ್ಥೆಯ ಹೊರಗಿನವರನ್ನು ನಡೆಸಿಕೊಳ್ಳುವ ರೀತಿಯೆ ಅಮಾನವೀಯವಾದುದು. ಮೌನೇಶ್ವರರು ಆಧಾರಸಹಿತವಾಗಿ ಜಾತಿ ವ್ಯವಸ್ಥೆಯನ್ನು ಖಂಡಿಸುತ್ತಾರೆ. ಅದಕ್ಕೆ ಅವರು ಕೊಡುವ ದೃಷ್ಟಾಂತ, ಉಪಮೆ, ರೂಪಕಗಳು ತೀರ ಮನಸ್ಸಿಗೆ ನಾಟುವಂತಹುಗಳಾಗಿವೆ. ಹಿಂದೆ ನೀರು, ಎಣ್ಣೆ, ತುಪ್ಪ ತೊಗಲಿನ ಚೀಲದಲ್ಲಿ ಸಾಗಿಸುತ್ತಿದ್ದರು. ಹೀಗೆ ಸಾಗಿ ಬಂದ ತುಪ್ಪ, ಎಣ್ಣೆಯನ್ನು ಉತ್ತಮರೆನ್ನಿಸಿಕೊಂಡವರು ಬಸಿದು ಬಸಿದು ಉಣ್ಣುತ್ತಿದ್ದರು. ಕ್ರಿಮಿ, ಕೀಟ, ಶ್ರಮಿಕರಿಂದ ಮುಟ್ಟಿ-ತಟ್ಟಿ ಬಂದ ಬೆಲ್ಲ, ಸಕ್ಕರೆಯನ್ನು ಎಂಜಲವೆಂದು ಬಿಡುತ್ತಿದ್ದರೆ? ಊರ ಕೆರೆ, ಭಾವಿ, ಗುಂಡಿಗಳು, ಹುಳು-ಹುಪ್ಪಟೆಗಳ ತಾಣಗಳು. ಅಂತಹುಗಳಿಂದ ತಂದ ನೀರು ಹೇಗೆ ನಿಮ್ಮ ಕುಲದ ಮಹಿಮೆಯನ್ನು ಹೆಚ್ಚಿಸುತ್ತದೆ. ಹಸಿದಾಗ ತಿಂದ ಕೂಳು ಕುಲಗೆಡಿಸುವುದೆ? ಹೀಗೆ ಮೌನೇಶ್ವರರು ಕುಲ, ಶೀಲಗಳನ್ನು ಪ್ರಶ್ನಿಸುತ್ತಾರೆ.

"ಹಸಿಯ ತೊಗಲೊಳಗಣ ತುಪ್ಪ
ಬಸಿಬಸಿದು ಉಂಡ ಮೇಲೆ
ಕೊರ‍್ಯಾಡಬಹುದೆ ಕುಲಛಲಕೆ, ಲೋಕದ
ಮುಸುರಿಗೆ ಹತ್ತಿದ ನೊಣಗಳರ‍್ಯಾ ನಿಮ್ಮ
ಪಿಸುರು ಶಾಸ್ತ್ರವ ಬಿರ‍್ಯಾಕೊ ಬಸವಣ್ಣ"

ಹೆಚ್ಚಾಗಿ ಶೂದ್ರರೆ ಕೃಷಿ ಕಾಯಕದಲ್ಲಿ ತೊಡಗಿರುತ್ತಿದ್ದರು. ಬ್ರಾಹ್ಮಣಾದಿ ಮೇಲು ವರ್ಣದವರಿಂದ ಅಪಮಾನ, ಅಪಹಾಸ್ಯಕ್ಕೀಡಾದರೂ ಅವರು ಕೂಡ ಕುಲ, ಶೀಲಗಳ ಆಚರಣೆಯಲ್ಲಿ ಹಿಂದೆ ಬೀಳುತ್ತಿರಲಿಲ್ಲ. ತಮಗಿಂತ ಕೆಳಗಿನವರನ್ನು ಕೀಳಾಗಿ ಕಾಣುತ್ತಿದ್ದರು, ಅಮಾನವೀಯವಾಗಿ ನಡೆಸಿಕೊಳ್ಳುತಿದ್ದರು ಅಂತಹವರಿಗೂ ಮೌನೇಶ್ವರರು ಚಾಟಿ ಬೀಸುತ್ತಾರೆ.

"ಸತ್ತ ಪಶುವಿನ ತೊಗಲು ಜತ್ತಿಗಿ ಮಿಣಿ ಮಾಡಿ
ಹೊತ್ತು ಒಯ್ಯುವಿರಿ ನಿಮ್ಮ ಹೊಲ ಮನೆಗೆ
ಉತ್ತರಿಯ ಮಳೆ ಬಂದು ಸುತ್ತಿ ಸುತ್ತಿ ಬಡಿವಾಗ
ನೆತ್ತಿಯಿಂದ ನೀರು ಬಾಯಿಗೆ ಇಳಿದಾವು ಕಾಣಾ ಬಸವಣ್ಣ"

ಮೌನೇಶ್ವರರು 'ಮಿಕ್ಕ ಮಾನವರಿಗೆ ತಿಳಿಯದ ಬೆಲೆ ಭೇದಂಗಳ ಕಟ್ಟಬಲ್ಲವರು', 'ಬೀದಿಗಳು ಎರಡೆಂಬೋ ಭೇದವ ಕೇಳಿರೋ', 'ದೇಹವು ಮೃತ್ಯುಂಜಯನ ಕೌತುಕವು', 'ಶರೀರವೆ ತಮ್ಮ ದೈವವು', 'ದೇಹವೇ ದೇವರು, ಜೀವವೆ ಶಿಷ್ಯನು' ಎನ್ನುವಂತಹ ವಚನಗಳಲ್ಲಿ ದರ್ಶನದ ಹೊಸ ಹೊಳಹುಗಳನ್ನೆ ತೆರೆದಿಟ್ಟಿದ್ದಾರೆ. ಮೌನೇಶ್ವರರು ನಡೆದು ತೋರಿಸಿದರು, ಅದರಂತೆ ನುಡಿದು ತೋರಿಸಿದರು. ಅವರ ವಚನಗಳು ಬೆಂಕಿಯ ಜ್ವಾಲೆಗಳು, ಅಜ್ಞಾನವನ್ನು ದಹಿಸುವುದೆ ಅವುಗಳ ಕಾರ್ಯ. ಇಡೀ ಪರಂಪರೆಯನ್ನೆ ಪರೀಕ್ಷಿಸುವ ಜೊಳ್ಳನ್ನು ತೂರಿ ಕಾಳನ್ನು ಸ್ವೀಕರಿಸುವ ಪ್ರವೃತ್ತಿ

ಅವರದು. ಮೌನೇಶ್ವರರು ಯಾವ ಮತ, ಪಂಥ, ಧರ್ಮ, ದೇವರುಗಳಿಗೆ ಕಟ್ಟುಬಿದ್ದವರಲ್ಲ ಅವರೊಬ್ಬ ಮಹಾನ್ ಸತ್ಯದರ್ಶಿ.

**ಆಕರ ಗ್ರಂಥಗಳು :**

೧. ವೀರೇಶ ಬಡಿಗೇರ ಡಾ. ಸಂ, ೨೦೧೬, ತಿಂತಿಣಿ ಮೌನೇಶ್ವರರ ವಚನಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು

೨. ವಿರೂಪಾಕ್ಷ ಬಡಿಗೇರ, ೧೯೮೦, ಶ್ರೀ ಮೌನೇಶ್ವರ ವಚನ ಸಮೀಕ್ಷೆ, ಶ್ರೀ ಮೌನೇಶ್ವರ ದೇವಸ್ಥಾನ ಕಮೀಟಿ, ಸವದತ್ತಿ

೩. ಪಡಶೆಟ್ಟಿ. ಎಂ. ಎಂ. ಡಾ., ೨೦೧೪, ತಿಂಥಿಣಿ ಮೋನಪ್ಪಯ್ಯ : ಒಂದು ಅಧ್ಯಯನ ಲಿಂಗಾಯತ ಅಧ್ಯಯನ ಸಂಸ್ಥೆ ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ, ಗದಗ

೪. ಜೀವಣ್ಣ ಮಸಳಿ ಸಂ., ೧೯೮೭, ಶ್ರೀ ಮೌನೇಶ್ವರರ ವಚನ ಸಂಗ್ರಹ, ವಿಶ್ವಪ್ರಕಾಶನ ಬಾಗಲಕೋಟ